## ಅಭ್ಯಾಸ

**I. ಪದಗಳ ಅರ್ಥ :**

**ಅಭಿರುಚಿ** = ಆಸಕ್ತಿ; ಒಲವು, **ಗಡುಸು** = ಬಿರುಸು, **ಛಲ** = ಹಟ, **ಪೂರೈಸು** = ಪೂರ್ಣಮಾಡು, **ಬೆಣಚುಕಲ್ಲು** = ಹೊಳಪುಳ್ಳ ಚೂಪಾದ ಕಲ್ಲು, **ವಿದ್ಯಾದಾನ** = ಶಿಕ್ಷಣ ನೀಡು, **ಕಲಕು** = ಕದಡು, **ಘನತೆ** = ಹಿರಿಮೆ, **ಪರಿಪರಿ** = ವಿವಿಧ ರೀತಿ, **ಪ್ರಾಚೀನ** = ಹಿಂದಿನ, **ಬೇಡು** = ವಿನಂತಿಸು, **ವಿನೀತ** = ಸೌಜನ್ಯ; ವಿಧೇಯ; ಬಾಗಿದ.

**II. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

**1. ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ ಯಾವುದು ?**

**ಉತ್ತರ:**
ಪ್ರಾಚೀನ ಭಾರತದ ಅತಿ ದೊಡ್ಡ ಗುರುಕುಲ ತಕ್ಷಶಿಲೆಯಲ್ಲಿನ ಗುರುಕುಲವಾಗಿತ್ತು.

**2 . ಮಕ್ಕಳು ತಕ್ಷಶಿಲೆಯಲ್ಲಿ ಓದಬೇಕೆಂದು ತಂದೆತಾಯಿಗಳು ಏಕೆ ಆಸೆ ಪಡುತ್ತಿದ್ದರು ?**

**ಉತ್ತರ:**
ತಕ್ಷಶಿಲೆಯ ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ, ಅಲ್ಲಿ ಓದುವುದೆಂದರೆ ಘನತೆಯ ವಿಷಯವಾದ್ದರಿಂದ ತಕ್ಷಶಿಲೆಯಲ್ಲಿ ಮಕ್ಕಳು ಓದಬೇಕೆಂದು ತಂದೆ - ತಾಯಿ ಆಸೆ ಪಡುತ್ತಿದ್ದರು.

**3. ತಾಯಿ ದಕ್ಷಿ ಗುರುಗಳಲ್ಲಿ ಏನೆಂದು ಬೇಡಿಕೊಂಡಳು?**

**ಉತ್ತರ:**
ತನ್ನ ಮಗನಿಗೆ ಗುರುಕುಲದಲ್ಲಿ ವಿದ್ಯೆ ಕಲಿಸ ಬೇಕೆಂದು ಬೇಡಿಕೊಂಡಳು.

**4. ಗುರುಗಳು ಬಾಲಕನ ಕೈನೋಡಿ ಏನೆಂದು ಹೇಳಿದರು?**

**ಉತ್ತರ:**
ಗುರುಗಳು, ಬಾಲಕನ ಕೈನೋಡಿ - "ಅವನ ಕೈಯಲ್ಲಿ ವಿದ್ಯಾರೇಖೆ ಇಲ್ಲ, ವಿದ್ಯೆ ಹತ್ತುವುದಿಲ್ಲ" ಎಂದು ಹೇಳಿದರು.

**5. ಬಾಲಕನು ವಿದ್ಯಾರೇಖೆಯನ್ನು ಯಾವುದರಿಂದ ಮೂಡಿಸಿಕೊಂಡನು?**

**ಉತ್ತರ:**
ಬಾಲಕನು ವಿದ್ಯಾರೇಖೆಯನ್ನು ಬೆಣಚು ಕಲ್ಲಿನಿಂದ ಮೂಡಿಸಿಕೊಂಡನು.

**6. ಪಾಣಿನಿಯ ಗುರುವಿನ ಹೆಸರೇನು?**

**ಉತ್ತರ:**
ಪಾಣಿನಿಯ ಗುರುವಿನ ಹೆಸರು "ಉಪಪರ್ವ".

**7. ಪಾಣಿನಿ ಯಾವ ಭಾಷೆಯಲ್ಲಿ ವ್ಯಾಕರಣ ರಚಿಸಿದನು?**

**ಉತ್ತರ:**

ಪಾಣಿನಿಯು ಸಂಸ್ಕೃತ ಭಾಷೆಯಲ್ಲಿ ವ್ಯಾಕರಣವನ್ನು ರಚಿಸಿದನು.

**ಆ) ಈ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ:**

**1. ಗುರುಗಳು ಬಾಲಕನಿಗೆ ವಿದ್ಯೆ ಕಲಿಸಲು ಏಕೆ ನಿರಾಕರಿಸಿದರು?**

**ಉತ್ತರ:**
ಬಾಲಕನು ಗುರುಕುಲ ಪ್ರವೇಶಿಸಿದಾಗ ಹೊಸ ಜಾಗ ಕಂಡು ಎತ್ತಲೋ ನೋಡುತ್ತಾ ನಿಂತಿರುವುದನು ಕಂಡ ಗುರುಗಳು ಅವನನ್ನು ಕರೆದು ಕೈ ನೋಡಿದರು. ಬಳಿಕ ಈ ಬಾಲಕನಿಗೆ ಓದಿನಲ್ಲಿ ಅಭಿರುಚಿಯಿಲ್ಲ. ವಿದ್ಯೆ ಹತ್ತದು ಎಂದು ತಿಳಿಸಿ ವಿದ್ಯೆ ಕಲಿಸಲು ನಿರಾಕರಿಸಿದರು.

**2. ಬಾಲಕ ತನ್ನ ಕೈಯಲ್ಲಿ ವಿದ್ಯಾರೇಖೆಯನ್ನು ಹೇಗೆ ಮೂಡಿಸಿಕೊಂಡನು ?**

**ಉತ್ತರ:**
ಬಾಲಕ ತನ್ನ ಕೈಯಲ್ಲಿ ವಿದ್ಯಾರೇಖೆ ಇಲ್ಲದಿರುವುದನ್ನು ಕೇಳಿ ತಿಳಿದ ಮೇಲೆ ತಕ್ಷಣ ಬೆಣಚುಕಲ್ಲಿನಿಂದ ಗಟ್ಟಿಯಾಗಿ ವಿದ್ಯಾರೇಖೆಯನ್ನು ಕೈ ಮೇಲೆ ಕೊರೆದು ಕೊಂಡನು. ಚರ್ಮಕಿತ್ತಿತು. ರಕ್ತ ಸುರಿಯಲು ಆರಂಭಿಸಿತು. ಹೀಗೆ ಬಾಲಕ ತನ್ನ ಕೈಯಲ್ಲಿ ವಿದ್ಯಾರೇಖೆ ಮೂಡಿಸಿ ಕೊಂಡನು

**3. ಗುರುಗಳು ಪಾಣಿನಿಗೆ ವಿದ್ಯೆ ನೀಡಲು ಏಕೆ ಮನಸ್ಸು ಮಾಡಿದರು ?**

**ಉತ್ತರ:**
ಗುರುಗಳ ಮಾತಿನಂತೆ ಬಾಲಕ ತನ್ನ ಕೈಯೊಳಗೆ ಇರದ ವಿದ್ಯಾರೇಖೆ ಮೂಡಿಸಲು ಬೆಣಚು ಕಲ್ಲಿನಿಂದ ವಿದ್ಯಾರೇಖೆಯನ್ನು ಕೊರೆದು ಕೊಂಡನು. ಇದರಿಂದ ಚರ್ಮ ಕಿತ್ತು, ರಕ್ತ ಸುರಿಯಿತು. ಬಾಲಕನಲ್ಲಿರುವ ಈ ಛಲವನ್ನು ಕಂಡ ಗುರುಗಳು ಅವನ ತಲೆ ನೇವರಿಸಿ, ಅಪ್ಪಿಕೊಂಡು ವಿದ್ಯೆ ನೀಡಲು ಮನಸ್ಸು ಮಾಡಿದರು.

**4. ಪಾಣಿನಿ ಜಗತ್ ಪ್ರಸಿದ್ಧನಾದುದು ಹೇಗೆ ?**

**ಉತ್ತರ:**

**ಉತ್ತರ:**
ಪಾಣಿನಿ ಗುರುಗಳಿಂದ ಕಲಿತ ವಿದ್ಯೆಯನ್ನು ಸತತ ಅಭ್ಯಾಸ ಮಾಡಿ ಚಿಂತನೆ ಮಾಡಿದ. ತನ್ನ ಪ್ರತಿಭೆಯಿಂದ ಹೊಸವಿಚಾರ ಹೊರಹೊಮ್ಮಿಸಿ ಸಂಸ್ಕೃತ ಭಾಷೆಗೆ ವ್ಯಾಕರಣ ಶಾಸ್ತ್ರ ರಚಿಸಿದ. ಇದರಿಂದ ಪಾಣಿನಿ ಜಗತ್ ಪ್ರಸಿದ್ಧನಾದನು.

**ಇ) ಕೆಳಗೆ ನೀಡಿರುವ ಮಾತಗಳನ್ನು ಯಾರು ಯಾರಿಗೆ ಹೇಳಿದರು ? ತಿಳಿಸಿರಿ.**

**1. "ಅವನ ಕೈಯಲ್ಲಿ ವಿದ್ಯಾರೇಖೆಯಿಲ್ಲ. ವಿದ್ಯೆ ಹತ್ತುವುದಿಲ್ಲ."**
**ಉತ್ತರ:**
ಈ ಮಾತನ್ನು **ಉಪಪರ್ವ** (ಗುರು) **ಪಾಣಿನಿ** (ಶಿಷ್ಯ)ನಿಗೆ ಹೇಳಿದರು.

**2. "ಇಗೋ ನೋಡು, ಇದು ವಿದ್ಯಾರೇಖೆ !"**
**ಉತ್ತರ:**
ಈ ಮಾತನ್ನು ಗುರು (ಉಪಪರ್ವ)ವಿನ ಬಳಿಯಿದ್ದ **ಒಬ್ಬ ಬಾಲಕ ಪಾಣಿನಿಗೆ** ಹೇಳಿದ ಮಾತಾಗಿದೆ.

**3. "ಗುರುಗಳೇ ನನ್ನ ಕೈಯಲ್ಲಿ ವಿದ್ಯಾರೇಖೆ ಮೂಡಿದೆ, ನೋಡಿ !"**
**ಉತ್ತರ:**
ಈ ವಾಕ್ಯವನ್ನು **ಪಾಣಿನಿ** ತನ್ನ **ಗುರುಗಳಿಗೆ** ಹೇಳಿದ ಮಾತಾಗಿದೆ.

**ಈ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ:**

1. ಬಾಲಕನು ಬೆಣಚು ಕಲ್ಲಿನಿಂದ ತನ್ನ ಕೈಮೇಲೆ **ವಿದ್ಯಾರೇಖೆಯನ್ನು** ಕೊರೆದುಕೊಂಡನು.
2. ಪಾಣಿನಿಯ ತಾಯಿಯ ಹೆಸರು **ದಕ್ಷಿ**
3. ಪಾಣಿನಿಯು **ಕ್ರಿ.ಪೂ.೬ನೇ** ಶತಮಾನದಲ್ಲಿ ಬದುಕಿದ್ದನು.
4. ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ **ತಕ್ಷಶಿಲೆ** ಆಗಿತ್ತು.

**III. ಭಾಷಾಭ್ಯಾಸ :**

**ಅ) ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ:**

**1. ಪ್ರಾಚೀನ :** ಪ್ರಾಚೀನ ಕಾಲದ ವಸ್ತುಗಳು ತುಂಬಾ ಅಮೂಲ್ಯವಾಗಿರುತ್ತದೆ.

**2. ಅಭಿರುಚಿ :** ಒಬ್ಬರ ಅಭಿರುಚಿ ಮತ್ತೊಬ್ಬರಂತೆ ಇರುವುದಿಲ್ಲ

**3. ಪೂರೈಸು :** ಹೆತ್ತ ತಂದೆ - ತಾಯಿಯರ ಕನಸ್ಸನ್ನು ಮಕ್ಕಳು ಪೂರೈಸಬೇಕು.

**4. ವಿನೀತ :** ದ್ರೋಣರ ಮೇಲೆ ಏಕಲವ್ಯನಿಗೆ ವಿನೀತ ಭಾವನೆಯಿತ್ತು

**5. ಪರಿಪರಿಯಾಗಿ :** ನಾನು ಪರಿಪರಿಯಾಗಿ ಬೇಡಿದರು ನನ್ನ ಮಾತು ಯಾರು ಕೇಳಲಿಲ್ಲ.

**ಇ) ಈ ನುಡಿಗಟ್ಟುಗಳ ಅರ್ಥ ತಿಳಿಯಿರಿ. ನಂತರ ನಿಮ್ಮ ವಾಕ್ಯದಲ್ಲಿ ಉಪಯೋಗಿಸಿರಿ :**

1. **ವಿದ್ಯೆಹತ್ತು** = ವಿದ್ಯೆಯನ್ನು ತಿಳಿದುಕೊ ಅಥವಾ ಅರ್ಥ ಮಾಡಿಕೊ.
**ವಾಕ್ಯ ಪ್ರಯೋಗ** = ಆಸಕ್ತಿಯಿಲ್ಲದೆ ಅಭ್ಯಾಸ ಮಾಡಿದರೆ ವಿದ್ಯೆ ಹತ್ತುವುದಿಲ್ಲ.
**ವಾಕ್ಯ ರಚನೆ** = ಮೂರ್ಖನಿಗೆ ಕಲಿಸಿದ ವಿದ್ಯೆ ಹತ್ತುವುದಿಲ್ಲ.

2. **ಕಡ್ಡಿ ಮುರಿದಂತೆ** = ನಿಷ್ಠುರವಾಗಿ .
ವಾಕ್ಯ ಪ್ರಯೋಗ = ಕಡ್ಡಿ ಮುರಿದಂತೆ ಮಾತನಾಡಬಾರದು.
ವಾಕ್ಯ ರಚನೆ **= ನಮ್ಮ ತಂದೆ ಕಡ್ಡಿಮುರಿದಂತೆ ತೀರ್ಮಾನಗಳನ್ನು ತೆಗೆದುಕೊಳ್ಳುವರು.**

3. **ಮನಸ್ಸು ಕಲಕು** = ಭಾವನೆಗಳನ್ನು ಕದಡು ವಾಕ್ಯ ಪ್ರಯೋಗ = ಭಿಕ್ಷುಕನ ದೀನ ಪರಿಸ್ಥಿತಿಯನ್ನು ಕಂಡು ಮನಸ್ಸು ಕಲಕಿತು.
ವಾಕ್ಯ ರಚನೆ = **ಹೆತ್ತ ತಾಯಿಗೆ ತನ್ನ ಮಗುವಿನ ಅಳು ಕಂಡಾಗ ಮನಸ್ಸು ಕಲಕಿತು.**